ಮಕ್ಕಳಿಗೆ ಜವಾಬ್ದಾರಿಯನ್ನು ವಹಿಸುವುದು

ಅನಿಲ್ ಎಸ್. ಅಂಗಡಿಕಿ

ನಮ್ಮ ಹೆಚ್ಚಿನ ಶೈಕ್ಷಣಿಕ ಗುರಿಗಳು ಅಥವಾ ಪಠ್ಯಕ್ರಮದ ಮಾರ್ಗಸೂಚಿಗಳು, ಶಿಕ್ಷಣದ ಮೂಲಕ ವ್ಯಕ್ತಿಗಳ ತಾರ್ಕಿಕ ಚಿಂತನೆಯ ಬೆಳವಣಿಗೆಯತ್ತ ಬೆರಳು ತೋರಿಸುತ್ತವೆ. ಈ ಕುರಿತ ಜವಾಬ್ದಾರಿಯು ದೊಡ್ಡ ಮಟ್ಟದಲ್ಲಿ ಶಾಲೆಗಳು ಮತ್ತು ಸಂಬಂಧಿಸಿದ ಎಲ್ಲಾ ಪಾಲುದಾರರ ಹೆಗಲ ಮೇಲಿದೆ ಎನ್ನುವುದು ಸ್ಪಷ್ಟ. ಈಗಾಗಲೇ ಬಹುತೇಕ ಶಿಕ್ಷಕರ ಅನುಭವಕ್ಕೆ ಬಂದಂತೆ, ಈ ಕಲ್ಪನೆಯನ್ನು ಕಾರ್ಯರೂಪಕ್ಕೆ ತರುವುದು ಅಷ್ಟು ಸುಲಭವಲ್ಲ. ಮಕ್ಕಳ ಚಿಂತನೆಗಳನ್ನು ರೂಪಿಸುವ ಹಲವು ವಿಧಾನಗಳನ್ನು ಕಲ್ಪಿಸುವಲ್ಲಿ ಶಿಕ್ಷಕರ ಪಾತ್ರ ದೊಡ್ಡದು ಎಂಬುದನ್ನು ಬಹುತೇಕ ನಾವೆಲ್ಲ ಒಪ್ಪಿಕೊಳ್ಳುತ್ತೇವೆ. ಆರೈಕೆ ಒದಗಿಸುವವರು ಮತ್ತು ಸಮಾನಮನಸ್ಕರು ಸಹ ನಿರ್ಣಾಯಕ ಪಾತ್ರವನ್ನು ವಹಿಸಿದರೂ, ಅವರ ಜೊತೆಗಿನ ನಿರಂತರ ಸಂವಾದದ ಮೂಲಕ ಶಿಕ್ಷಕರು ಹೆಚ್ಚಿನ ಪ್ರಭಾವ ಬೀರುತ್ತಾರೆ. ಸಾಮಾನ್ಯವಾಗಿ ಶಾಲೆಗಳು ಸಮಗ್ರ ಯೋಜನೆಯನ್ನು ಹೊಂದಿರುತ್ತವೆ ಹಾಗು ಇದನ್ನು ಕಾರ್ಯರೂಪಕ್ಕೆ ತರಲು ವಿವಿಧ ಪ್ರಕ್ರಿಯೆಗಳು ಮತ್ತು ಕಾರ್ಯಕ್ರಮಗಳನ್ನು ನಡೆಸುತ್ತವೆ.

ಯಾದಗಿರಿಯ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ, ನನ್ನ ಅಭಿಪ್ರಾಯದಲ್ಲಿ, ವಿವಿಧ ಇತರ ವಿಧಾನಗಳು ಬೆಂಬಲಿಸಿದ ಒಂದು ವಿಧಾನವನ್ನು ಪ್ರಯತ್ನಿಸಿದೆವು. ನಾವು ಮಕ್ಕಳಿಗೆ ಮುಕ್ತ ಮತ್ತು ಭೀತಿರಹಿತ ಪರಿಸರವನ್ನು ಕಲ್ಪಿಸಿದಾಗ, ಅವರ ಜೊತೆಗೆ ಉತ್ತಮ ಸಂಬಂಧ ರೂಪಿಸುವುದು; ಮುಕ್ತವಾಗಿ ಮತ್ತು ದೃಢವಾಗಿ ತಮ್ಮನ್ನು ತಾವು ಅಭಿವ್ಯಕ್ತಿಗೊಳಿಸುವ ಹಾಗು ತರಗತಿಯಲ್ಲಿ ತಮಗೆ ಅರ್ಥವಾಗದ ವಿಷಯಗಳ ಕುರಿತು ಪ್ರಶ್ನೆಗಳನ್ನು ಕೇಳುವ ಮೂಲಕ ವಿದ್ಯಾರ್ಥಿಗಳು ಆತ್ಮವಿಶ್ವಾಸಗಳಿಸುವುದು – ಮುಂತಾದ ಪ್ರಯೋಜನಗಳು ಉಂಟಾದವು. ಆದರೆ ಕ್ರಮೇಣ ಮಕ್ಕಳ ವರ್ತನೆಯ ನಿರ್ವಹಣೆಯಲ್ಲಿ ನಾವು ಸವಾಲುಗಳನ್ನು ಎದುರಿಸಬೇಕಾಯಿತು. ಕೆಲವೊಂದು ಸಂದರ್ಭಗಳಲ್ಲಿ ಮಕ್ಕಳು ತಮ್ಮ ಸಮಾನಮನಸ್ಕರು ಅಥವಾ ಅವರ ಕೆಲಸವನ್ನು ಗೌರವಿಸುತ್ತಿರಲಿಲ್ಲ. ಪೋಷಕರಿಗೆ ಸರಿಯಾಗಿ ಪ್ರತಿಕ್ರಿಯಿಸದೆ ಇರುವುದು, ತರಗತಿಯ ಕೆಲಸವನ್ನು ಪೂರ್ಣಗೊಳಿಸದೆ ಇರುವುದು, ತರಗತಿ ಅಥವಾ ಬೆಳಗ್ಗಿನ ಸಭೆಯ ವೇಳೆ ತೊಂದರೆ ಉಂಟು ಮಾಡುವುದು, ಶಾಲೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಆಸಕ್ತಿ ತೋರದೆ ಇರುವುದು ಅಥವಾ ಇತರರಿಗೆ ಸಹಕಾರ ನೀಡದೆ ಇರುವುದು – ಮುಂತಾದ ಸವಾಲುಗಳು ಉಂಟಾದವು. ಈ ಸವಾಲುಗಳ ಕುರಿತು ನಮ್ಮ ನಡುವೆಯೇ ಚರ್ಚೆ ನಡೆಸಿ, ಇತರ ಶಾಲೆಗಳ ಅವಲೋಕನ ಮತ್ತು ಪರಿಣತಿಯ ಮೂಲಕ, ಚಾಲ್ತಿಯಲ್ಲಿರುವ ಸಂವಾದದ ವಿಧಾನವನ್ನು ವೃದ್ಧಿಸಲು ಮತ್ತು ಸುಧಾರಿಸಲು ಪ್ರಾರಂಭಿಸಿದೆವು. ಮಕ್ಕಳ ಜೊತೆ ಪ್ರತ್ಯೇಕವಾಗಿ, ಅವರ ಪೋಷಕರ ಜೊತೆ, ಸಮಾನಮನಸ್ಕರ ಜೊತೆ, ಕೆಲವೊಮ್ಮೆ ಗುಂಪಿನಲ್ಲಿ ವಿವಿಧ ವಿಧಾನಗಳನ್ನು ಅನ್ವೇಷಿಸಲಾಯಿತು. ಕೆಲ ಹಂತದವರೆಗೆ ಇವು ಸಹಕಾರಿ ಎನಿಸಿದವು. ಆದರೆ, ತರಗತಿಗಳಲ್ಲಿ, ಸಭೆ ಅಥವಾ ಕಾರ್ಯಕ್ರಮಗಳಲ್ಲಿ ಇವುಗಳಿಗೆ ಒಂದಷ್ಟು ಸಮಯ ಬೇಕಾಯಿತು. ಅಲ್ಲದೆ ಮಕ್ಕಳು ಈ ಸಂವಾದವನ್ನು ಲಘುವಾಗಿ ಪರಿಗಣಿಸಿದಾಗ, ಮಕ್ಕಳಲ್ಲಿ ತರಗತಿಯ ಶಿಸ್ತನ್ನು ಜಾರಿಗೊಳಿಸುವುದು, ಅಂತಹ ಮಕ್ಕಳ ಮೇಲೆ ನಿರಂತರ ಫಾಲೋ–ಅಪ್ ಮಾಡುವುದು – ಹೀಗೆ ಇನ್ನೂ ಕೆಲವು ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಮಕ್ಕಳ ಪ್ರತಿಕ್ರಿಯೆ ಮತ್ತು ಶಿಕ್ಷೆಯ (ಇದನ್ನು ಇವರು ತಮ್ಮ ಮನೆಯಲ್ಲಿ ಹೆಚ್ಚಿನದಾಗಿ ಅನುಸರಿಸುತ್ತಾರೆ) ಮೂಲಕ ಮಕ್ಕಳ ವರ್ತನೆಯನ್ನು ಸರಿಪಡಿಸಲು ಕಷ್ಟಪಡುತ್ತಿರುವ ಪೋಷಕರ ಪ್ರತಿಕ್ರಿಯೆ ಹಾಗು ತರಗತಿ ಮತ್ತು ಇತರ ಶಾಲಾ ಅಭ್ಯಾಸಗಳ ವೇಳೆ ಅಮೂಲ್ಯ ಸಮಯವನ್ನು ಕಳೆದುಕೊಂಡ ನಮ್ಮ ಅನುಭವವನ್ನು ಆಧರಿಸಿ, ನಮ್ಮ ಸಮಯವನ್ನು ಉಳಿಸಬೇಕಾದರೆ ಸಂವಾದದ ಜೊತೆಗೆ, ಮಕ್ಕಳನ್ನು ಇನ್ನೂ ಹೆಚ್ಚು ಜವಾಬ್ದಾರರನ್ನಾಗಿಸಲು ಹಾಗು ಅದಕ್ಕೂ ಮಿಗಿಲಾಗಿ ಅವರಲ್ಲಿ ಜವಾಬ್ದಾರಿಯ ಪ್ರಜ್ಞೆಯನ್ನು ಮೂಡಿಸಲು ಇನ್ನೂ ಏನಾದರೂ ಮಾಡಬೇಕು ಎಂದು ನಾವು ಭಾವಿಸಿದೆವು.

ಕೆಲ ಇತರ ಶಾಲೆಗಳು ಪ್ರಜಾತಾಂತ್ರಿಕ ಪ್ರಕ್ರಿಯೆಯ ಮೂಲಕ ಈ ಸವಾಲುಗಳಿಗೆ ಉತ್ತರ ಕಂಡುಕೊಂಡಿರುವುದು ನಮ್ಮಲ್ಲಿ ಕೆಲ ಆಲೋಚನೆಗಳನ್ನು ಉಂಟು ಮಾಡಿದವು. ಯಶಸ್ವಿಯಾಗಿ ಚುನಾವಣೆಗಳನ್ನು ನಡೆಸಿ ಎಲ್ಲಾ ತರಗತಿಗಳಿಂದ ಪ್ರತಿನಿಧಿಗಳನ್ನು ಆರಿಸುವುದು ಮತ್ತು ಚುನಾಯಿತ ಸಮಿತಿಯ ಸಭೆಗಳ ಮೂಲಕ ಶಾಸನಸಭೆಗಳನ್ನು ರೂಪಿಸುವುದು. ಶಾಲೆಯ ದಿನಚರಿ, ಸವಾಲುಗಳು (ಹೆಚ್ಚಿನದಾಗಿ ವರ್ತನೆಗೆ ಸಂಬಂಧಿಸಿದ ವಿಷಯಗಳು) ಮುಂತಾದವುಗಳನ್ನು ಸಮಿತಿಯು ಚರ್ಚಿಸಬಹುದು. ಶಾಲೆಯಲ್ಲಿ ಅಭ್ಯಾಸಗಳು ಮತ್ತು ಶಿಸ್ತನ್ನು ಜಾರಿಗೊಳಿಸುವ ಜವಾಬ್ದಾರಿಯುತ ಪಾತ್ರವನ್ನು ವಹಿಸಲು ಮಕ್ಕಳಿಗೆ ಅನುವು ಮಾಡಿಕೊಡುವುದು ಉತ್ತಮವಾದ ಅಭ್ಯಾಸವಾಗಿದೆ ಹಾಗು ಇದನ್ನು ಬಳಸಿ ಅನೇಕ ಶಾಲೆಗಳು ಮಕ್ಕಳಲ್ಲಿ ಪ್ರಜಾತಾಂತ್ರಿಕ ಮೌಲ್ಯಗಳನ್ನು ಬಿತ್ತುವಲ್ಲಿ ಯಶಸ್ವಿಯಾಗುತ್ತಿತ್ತು. ಶಾಲಾ ಆಡಳಿತದ ಈ ಮಾದರಿಯು ಅನೇಕ ಅನುಕೂಲತೆಗಳನ್ನು ಹೊಂದಿದೆ. ಈ ಮಾದರಿಯನ್ನು ಅನುಸರಿಸಿ ಅನೇಕ ವಿಚಾರಗಳನ್ನು ಯಶಸ್ವಿಯಾಗಿ ಬಗೆಹರಿಸುವ ಬಗ್ಗೆ ನಾವು ಚರ್ಚಿಸಲು ಪ್ರಾರಂಭಿಸಿದೆವು. ಹೇಗೆ ಶಾಲೆಯ ಪ್ರತಿ ವ್ಯಕ್ತಿಯೂ ದಿನನಿತ್ಯದ ಶಾಲಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಹೇಗೆನ್ನುವುದು ಮೊದಲ ಪ್ರಮುಖ ಗುರಿ. ಚುನಾವಣಾ ವಿಧಾನಕ್ಕಿಂತಲೂ ಇದು ಹೆಚ್ಚು ಪರಿಣಾಮಕಾರಿಯಾಗಿ ಕಂಡು–ಬಂದಿತು. ಏಕೆಂದರೆ, ಚುನಾವಣಾ ವಿಧಾನದಲ್ಲಿ, ಮತ ಚಲಾಯಿಸಿ ಪ್ರತಿನಿಧಿಗಳನ್ನು ಆರಿಸಿದ ನಂತರ ಉಳಿದವರು ಹೆಚ್ಚಿನ ಮಟ್ಟಿಗೆ ನಿಷ್ಕ್ರಿಯರಾಗಿ ಬಿಡುತ್ತಾರೆ.

ಪ್ರಜಾಪ್ರಭುತ್ವ ಒಂದು ಜೀವನ ಮಾರ್ಗವಾಗಿದ್ದು, ಮನುಷ್ಯರಲ್ಲಿ, ಇತರರ ಜೊತೆಗಿನ ಕೆಲಸಕಾರ್ಯಗಳಲ್ಲಿ, ಮಾನವ ಸ್ವಭಾವದ ಮೇಲಿನ ನಂಬಿಕೆಯ ಮೂಲಕ ಒಂದು ಅನುಭವವು ರೂಪುಗೊಳ್ಳುತ್ತದೆ. ಇದು ಜನರಿಂದ ಪರಿಶ್ರಮವನ್ನು ಬಯಸುವ ಒಂದು ನೈತಿಕ ಮಾದರಿಯಾಗಿದೆ. ಇದು ನಮ್ಮಿಂದ ಹೊರಗಿರುವ ಒಂದು ಸಾಂಸ್ಥಿಕ ಪರಿಕಲ್ಪನೆಯಲ್ಲ. ಪ್ರಜಾಪ್ರಭುತ್ವದ ಕಾರ್ಯವು ನಿರಂತರವಾದುದಾಗಿದ್ದು, ಎಲ್ಲರೂ ಹಂಚಿಕೊಳ್ಳುವ ಮತ್ತು ಎಲ್ಲರೂ

ತಮ್ಮ ಕೊಡುಗೆ ನೀಡುವಂಥ ಮುಕ್ತವಾದ ಸೃಷ್ಟಿ ಮತ್ತು ಹೆಚ್ಚು ಮಾನವೀಯ ಅನುಭವವಾಗಿದೆ (ಜಾನ್ ಡ್ಯೂವಿ, ಕ್ರಿಯೇಟಿವ್ ಡೆಮಾಕ್ರಸಿ)

ಇದನ್ನು ಸಾಧಿಸುವುದಕ್ಕಾಗಿ ನಾವು ಶಾಲಾ ಕಾರ್ಯನಿರ್ವಹಣೆಯ ಎಲ್ಲಾ ಕ್ಷೇತ್ರಗಳನ್ನು ಒಳಗೊಂಡು, ಶಾಲೆಯ ಪ್ರತಿ ಸದಸ್ಯನನ್ನು ಪ್ರತಿನಿಧಿಸುವ ಸಮಿತಿಗಳನ್ನು ರೂಪಿಸಲು ನಿರ್ಧರಿಸಿದೆವು. ಸಂತಸದ ವಿಚಾರವೇನೆಂದರೆ, ಸುಮಾರು ಆರು ವರ್ಷಗಳ ಹಿಂದೆ ನಾವು ಇದನ್ನು ರೂಪಿಸಿದಾಗ, ಪ್ರತಿ ಮಗು ಮತ್ತು ಶಿಕ್ಷಕ ಯಾವುದಾದರೂ ಒಂದು ಸಮಿತಿಯ ಭಾಗ ಎನಿಸುವಂತೆ ಪ್ರತಿ ಸಮಿತಿಯು ಪ್ರತಿ ತರಗತಿಯಿಂದ ಪ್ರತಿನಿಧಿಗಳನ್ನು ಹೊಂದಿತ್ತು. ಶಾಲಾ ಪ್ರಕ್ರಿಯೆಗಳ ಪರಿಣಾಮಕಾರಿ ಕಾರ್ಯನಿರ್ವಹಣೆ ಮತ್ತು ಎಲ್ಲರೂ ಪಾಲಿಸ-ಬೇಕಾದ ನಿಯಮಗಳನ್ನು ರೂಪಿಸುವ ಸಲುವಾಗಿ ಚರ್ಚೆ ನಡೆಸಲು, ಸದಸ್ಯರ ಪಾತ್ರ ಮತ್ತು ಜವಾಬ್ದಾರಿಯನ್ನು ಅರ್ಥ ಮಾಡಿಕೊಳ್ಳಲು ಈ ಸಮಿತಿಗಳು ಪ್ರತಿ ವಾರ ಸಭೆ ಸೇರಿದವು. ಶಿಕ್ಷಕರು ಸಹ ಈ ಸಮಿತಿಯಲ್ಲಿದ್ದರು. ಆದರೆ ಇವರು ಚಾಲಕನ ಪಾತ್ರ ವಹಿಸಲಿಲ್ಲ. ಬದಲಾಗಿ ಸಭೆಯ ವೇಳೆ ಚರ್ಚೆಗೆ ಮಾರ್ಗದರ್ಶನ ನೀಡಿದರು. ಸಮಿತಿಯ ಸದಸ್ಯರ ನಡುವೆ ಜವಾಬ್ದಾರಿಗಳನ್ನು ಹಂಚಿದರು ಮತ್ತು ಶಾಲಾ ಸಭೆಗಳಲ್ಲಿ ತೆಗೆದುಕೊಂಡ ನಿರ್ಧಾರಗಳು ಮತ್ತು ಬೆಳವಣಿಗೆಗಳನ್ನು ಸಂವಹಿಸುವ ಕೆಲಸವನ್ನು ಮಾಡಿದರು. ಆರಂಭದಲ್ಲಿ, ಕಾರ್ಯರೂಪಕ್ಕೆ ತರಲು, ಈ ಕಲ್ಪನೆಯು ಕಷ್ಟದ ಕೆಲಸವಾಗಿ ಕಂಡುಬಂದಿತು. ಏಕೆಂದರೆ, ಈ ಸಮಿತಿಗಳನ್ನು ರೂಪಿಸಲು ಮತ್ತು ಇವುಗಳ ಕಾರ್ಯನಿರ್ವಹಣೆಗೆ ಮಕ್ಕಳು ಪ್ರಜಾತಾಂತ್ರಿಕ ಪಥದಲ್ಲಿ ಸಾಗುವಂತೆ ಅವರನ್ನು ಮನವೊಲಿ-ಸುವುದು ಅಥವಾ ಅದರ ಬಗ್ಗೆ ಅರಿವು ಮೂಡಿಸಲು ಸಾಕಷ್ಟು ಪ್ರಯತ್ನ ಬೇಕಿತ್ತು. ಈ ಪ್ರಕ್ರಿಯೆಯನ್ನು ಪಾರದರ್ಶಕ ರೀತಿಯಲ್ಲಿ ನಡೆಸಲು ಹಾಗು ಪ್ರತಿಯೊಬ್ಬನು ಪ್ರತಿ ಕ್ಷೇತ್ರದಲ್ಲಿ ದುಡಿದ ಅನುಭವವನ್ನು ಪಡೆಯಲು, ಲಾಟರಿ ವಿಧಾನವನ್ನು ಅಳವಡಿಸಲಾಯಿತು. ಹತ್ತು ಕಾರ್ಯಗಳನ್ನು ಆಧರಿಸಿ ತಂಡಗಳನ್ನು ರೂಪಿಸಲಾಯಿತು ಮತ್ತು ಈ ತಂಡಕ್ಕೆ ಸಮಿತಿಯನ್ನು ರೂಪಿಸಲು ಲಾಟರಿ ವಿಧಾನವನ್ನು ಬಳಸಿಕೊಳ್ಳಲಾಯಿತು. ಮಾಸಿಕ ಶಾಲಾ ಸಭೆಯಲ್ಲಿ, ಕಾರ್ಯಗಳನ್ನು ತಂಡಗಳ ನಡುವೆ ಅದಲುಬದಲು ಮಾಡಲಾಯಿತು. ಹೀಗೆ, ವರ್ಷದ ಕೊನೆಗೆ, ಪ್ರತಿಯೊಬ್ಬರಿಗೂ ಎಲ್ಲಾ ಹತ್ತು ಸಮಿತಿಗಳಲ್ಲಿ ಕೆಲಸ ಮಾಡುವ ಅವಕಾಶ ದೊರೆಯಿತು. ಸಮಿತಿಯ ಹೆಸರಿನಲ್ಲಿ ನಿರ್ದಿಷ್ಟ ಜವಾಬ್ದಾರಿಯನ್ನು ಹೊತ್ತುಕೊಂಡು ಸಣ್ಣ ಪಂಗಡಗಳಲ್ಲಿ ಕುಳಿತುಕೊಳ್ಳುವುದು ಮತ್ತು ಈ ನಿಟ್ಟಿನಲ್ಲಿ ಸುಗಮ ಕಾರ್ಯನಿರ್ವಹಣೆಗಾಗಿ ಕೆಲಸ ಮಾಡುವುದು ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಪಾಲಿಗೆ ತುಂಬಾ ರೋಮಾಂಚಕ ಅನುಭವವೆನಿಸಿತು.ಶಾಲೆಯ ವಿವಿಧ ವಿಭಾಗಗಳ ಮೇಲೆ ಬೆಳಕು ಹರಿಸುವುದಕ್ಕಾಗಿ ಈ ಸಮಿತಿಗಳನ್ನು ರೂಪಿಸಲಾಗಿತ್ತು. ಹೊಸ ವಿಚಾರಗಳೊಂದಿಗೆ ದಕ್ಷತೆಯನ್ನು ತರುವುದು, ಎಲ್ಲಾ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ (ಎಲ್ಲಾ ವರ್ಗಗಳಿಂದ) ಮತ್ತು ಅವರು ವಿಷಯ ವಿನ್ಯಾಸಗೊಳಿಸಿದಂತೆಯೇ ಹೆಚ್ಚು ಜವಾಬ್ದಾರರಾಗುವುದು – ಇದು ವಿವಿಧ ವಲಯಗಳನ್ನು ಆರಿಸುವುದರ ಹಿಂದಿನ ಉದ್ದೇಶವಾಗಿತ್ತು. ಈ ಕೆಳಗೆ ಹತ್ತು ಸಮಿತಿಗಳು ಮತ್ತು ಅವುಗಳ ಕಾರ್ಯಗಳನ್ನು ಪಟ್ಟಿ ಮಾಡಲಾಗಿದೆ.

1. ಅಸೆಂಬ್ಲಿ ಸಮಿತಿ: ಶಾಲೆಯ ಪ್ರತಿನಿತ್ಯದ ಸಭೆಗಳಿಗೆ ಹೊಣೆಗಾರಿಕೆ – ಬೆಳಗ್ಗಿನ ಸಭೆ, ತರಗತಿಯೊಳಗಿನ ಸಭೆ, ಶಿಕ್ಷಕರ ಸಭೆ, ಸಂಜೆಯ ಸಭೆ.
2. ಆಹಾರ ಸಮಿತಿ: ಮಕ್ಕಳ ಮಧ್ಯಾಹ್ನದ ಊಟ (ಎಂ.ಡಿ.ಎಂ) ಮತ್ತು ಹಾಲು/ಮೊಟ್ಟೆಯ ಜವಾಬ್ದಾರಿ.
3. ಗ್ರಂಥಾಲಯ ಸಮಿತಿ: ಶಾಲೆಯ ಮತ್ತು ತರಗತಿ ಕೊಠಡಿಯ ಗ್ರಂಥಾಲಯದ ನಿರ್ವಹಣೆ.
4. ಶಾಲಾ ಉದ್ಯಾನವನ ಸಮಿತಿ: ಗಿಡಗಳನ್ನು ನೆಡುವುದು ಮತ್ತು ಕಿಚನ್ ಗಾರ್ಡನ್‌ನ ನಿರ್ವಹಣೆ.
5. ಕ್ರೀಡಾ ಸಮಿತಿ: ಆಟಗಳು ಮತ್ತು ಕ್ರೀಡೆಗಳಿಗೆ ಜವಾಬ್ದಾರಿ.
6. ಸ್ವಚ್ಛತೆ ಮತ್ತು ನೈರ್ಮಲ್ಯ ಸಮಿತಿ: ತರಗತಿ ಕೊಠಡಿಗಳು, ಶೌಚಾಲಯ ಮತ್ತು ವಠಾರದ ಇತರ ಪ್ರದೇಶಗಳ ಸ್ವಚ್ಛತೆ ಮತ್ತು ವೈಯಕ್ತಿಕ ನೈರ್ಮಲ್ಯದ ಹೊಣೆಗಾರಿಕೆ.
7. ಕಾರ್ಯಕ್ರಮ ಮತ್ತು ಆಚರಣೆ ಸಮಿತಿ: ರಾಷ್ಟ್ರೀಯ ಹಬ್ಬಗಳು, ಬಾಲಶೋಧ ಮೇಳಗಳು, ಸಬ್ಜೆಕ್ಟ್ ವೀಕ್ ಮುಂತಾದ ಶಾಲಾ ಕಾರ್ಯಕ್ರಮಗಳ ನಿರ್ವಹಣೆ.
8. ಸುರಕ್ಷಾ ಸಮಿತಿ: ಮಕ್ಕಳ ದೈಹಿಕ ಸುರಕ್ಷತೆಯ (ಉದಾಹರಣೆಗೆ, ಕಾರಿಡಾರ್‌ನಲ್ಲಿ ಹೋಗುವಾಗ) ಜವಾಬ್ದಾರಿ.
9. ಶಾಲಾ ನಿಯಮಗಳ ಸಮಿತಿ: ಶಾಲೆ ಮತ್ತು ತರಗತಿ ಕೊಠಡಿಗಳಲ್ಲಿ ನಿಯಮಗಳನ್ನು ಜಾರಿಗೊಳಿಸುವ ಹಾಗು ಜಾರಿಯ ಕುರಿತು ನಿಗಾ ವಹಿಸುವ ಜವಾಬ್ದಾರಿ ಹೊಂದಿರುವ ಸಮಿತಿ.
10. ಶಾಲಾ ಪರಿಸರ ಸಮಿತಿ: ತರಗತಿ ಕೊಠಡಿಗಳು ಮತ್ತು ಹೊರ ಆವರಣದಲ್ಲಿ ಸೌಂದರ್ಯ ಮತ್ತು ಅಚ್ಚುಕಟ್ಟನ್ನು ಪಾಲಿಸುವ ಜವಾಬ್ದಾರಿ ಹೊಂದಿರುವ ಸಮಿತಿ.

ಕಳೆದ ವರ್ಷ, ಬಹುತೇಕ ಸಮಾನ ಕಾರ್ಯಗಳಿದ್ದ 9 ಮತ್ತು 10ನೇ ಸಂಖ್ಯೆಯ ಸಮಿತಿಗಳನ್ನು ವಿಲೀನಗೊಳಿಸುವ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು. ಹೀಗಾಗಿ, ಪ್ರಸ್ತುತ ಒಂಬತ್ತು ಕಾರ್ಯಗಳು ಅಥವಾ ಸಮಿತಿಗಳು ಚಾಲ್ತಿಯಲ್ಲಿವೆ.

ನಮಗೆ ಹೇಗೆ ಪ್ರಯೋಜನಕಾರಿಯಾಯಿತು?

ಶಾಲೆಯ ಕೆಲಸವು ಸುಗಮವಾಗಿ ನಡೆಯಲು ಶುರುವಾಯಿತು. ಉದಾಹರಣೆಗೆ, ಶಾಲೆಯ ವಾತಾವರಣವನ್ನು ಸ್ವಚ್ಛವಾಗಿಡಲು ಮತ್ತು ಉತ್ತಮವಾಗಿ ಕಾಪಾಡಲು, ಎಲ್ಲಾ ತರಗತಿಗಳಿಂದ ಪ್ರಾತಿನಿಧಿತ್ವ ಹೊಂದಿದ್ದ ಸಮಿತಿಯ ಸದಸ್ಯರು, 'ಪೆನ್ಸಿಲ್ ಮೊನಚುಗೊಳಿಸುವಾಗ ಕಸದ ಡಬ್ಬಿ ಬಳಸಿ' – ಹೀಗೆ ಇತರರಿಗೆ ಸ್ವಚ್ಛತೆಯನ್ನು ಕಾಪಾಡಲು ಹೇಳಿದರು.

ಎಂ.ಡಿ.ಎಂ ಸಮಿತಿಯ ಸದಸ್ಯರು, ಅಚ್ಚುಕಟ್ಟಾಗಿ ಕುಳಿತುಕೊಳ್ಳುವ ವ್ಯವಸ್ಥೆಯನ್ನು ಮಾಡುವುದು, ಮೇಲ್ವಿಚಾರಣೆ, ಆಹಾರವನ್ನು ಹಾಳುಮಾಡುವ ಮಕ್ಕಳ ಜೊತೆ ಚರ್ಚೆ ಮಾಡುವುದು, ತರಕಾರಿಗಳನ್ನು ತಿನ್ನಲು ಅವರನ್ನು ಪ್ರೇರೇಪಿಸುವುದು ಮುಂತಾದ ಕೆಲಸಗಳನ್ನು ಮಾಡಲು ಪ್ರಾರಂಭಿಸಿದರು. ಸಣ್ಣ ತರಗತಿಗಳ ಮಕ್ಕಳು ಹಿರಿಯ ಪ್ರಾಥಮಿಕ ಮಕ್ಕಳು ಹಾಗು ಶಿಕ್ಷಕರು ಸಹ ತರಕಾರಿಗಳನ್ನು ಹಾಳುಮಾಡದಂತೆ ನಿಗಾ ವಹಿಸುತ್ತಿದ್ದುದು ಆಸಕ್ತಿಕರವಾಗಿತ್ತು. ಮೆನು ಮತ್ತು ಪ್ರಮಾಣದ ಆಧಾರದಲ್ಲಿ ಬಳಸಿದ ವಸ್ತುಗಳು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳ ಹಾಜರಾತಿ ಹಾಗು ಆ ದಿನ ಹಾಳು ಮಾಡಿದ ಆಹಾರದ ಪ್ರಮಾಣವನ್ನು ಪ್ರದರ್ಶಿಸುವುದು ಜಾಗೃತಿಯನ್ನು ರೂಪಿಸಿತು.

ಕಾರ್ಯಕ್ರಮಗಳು ಮತ್ತು ಸಂಭ್ರಮಾಚರಣೆಗಳನ್ನು ಎಷ್ಟು ಅರ್ಥಪೂರ್ಣವಾಗಿ ಆಚರಿಸಬಹುದು ಎಂಬುದಾಗಿ ಕಾರ್ಯಕ್ರಮದ ಮೊದಲೇ ಚರ್ಚೆ ನಡೆಸುವುದು, ದಿನನಿತ್ಯದ ಸಭೆಗಳಲ್ಲಿ ವಿವಿಧ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವುದು, ಸುರಕ್ಷತೆಯ ಕುರಿತು ಅನುಸರಿಸಬೇಕಾದ ವಿಧಾನಗಳನ್ನು ಚರ್ಚಿಸುವುದು ಮತ್ತು

ನಿರ್ಧರಿಸುವುದು ಮುಂತಾದ ವಿಚಾರಗಳು ಅತ್ಯಂತ ಉಪಯುಕ್ತವೆನಿಸಿದವು. ಶಾಲೆಯು ಎದುರಿಸುತ್ತಿರುವ ಪ್ರಸ್ತುತ ಸವಾಲುಗಳನ್ನು ಚರ್ಚಿಸಲು ಮತ್ತು ಪರಿಹಾರ ಕಂಡು-ಹಿಡಿಯುವುದಕ್ಕಾಗಿ ಶಾಲಾ ನಿಯಮಗಳ ಸಮಿತಿಯು ಸಂಯೋಜಿಸುವ 'ಮಹಾಸಭಾ' ಎನ್ನುವ ಮಾಸಿಕ ಸಭೆಗಳನ್ನು ನಡೆಸಲಾಯಿತು. ಈ ಸಭೆಗಳಲ್ಲಿ, ಮಕ್ಕಳ ವರ್ತನೆಯ ದೂರುಗಳ ಜೊತೆಗೆ, ಕೆಲವು ಆಸಕ್ತಿಕರ ಚರ್ಚೆಗಳು ಮತ್ತು ಮಕ್ಕಳ ಕೆಲವು ಬೇಡಿಕೆಗಳು ಸಹ ಕೇಳಿಬಂದವು. ಉದಾಹರಣೆಗೆ, ಗುರುವಾರದಂದು ನೀಡುವ ಬಿಸಿ ಬೇಳೆ ಬಾತ್ ಅನ್ನು ಹೆಚ್ಚಿನ ಮಕ್ಕಳು ಇಷ್ಟಪಡದೆ ಇರುವುದರಿಂದ ಅದನ್ನು ಮೆನುವಿನಿಂದ ತೆಗೆದು ಹಾಕಲು, ಚಪ್ಪಲಿಗಳ ಬದಲಿಗೆ ಶೂಗಳನ್ನು ಏಕೆ ನೀಡಲಾಗಿಲ್ಲ, ಆರನೇ ತರಗತಿಯಿಂದ ಮಾತ್ರವೇ ಮಕ್ಕಳಿಗೆ ಹಿಂದಿಯನ್ನು ಕಲಿಸಲಾಗುತ್ತಿದ್ದು, ಇದಕ್ಕಿಂತ ಕೆಳಗಿನ ವರ್ಗದವರಿಗೆ ಯಾಕೆ ಈ ಭಾಷೆಯನ್ನು ಕಲಿಸಲಾಗುತ್ತಿಲ್ಲ, ವಾರದಲ್ಲಿ ಗ್ರಂಥಾಲಯ ಅಥವಾ ಕ್ರೀಡಾ ಅವಧಿಗಳನ್ನು ಹೆಚ್ಚಿಸಲು ಬೇಡಿಕೆ ಇತ್ಯಾದಿ.

ಒಬ್ಬ ಜವಾಬ್ದಾರಿಯುತ ನಾಗರಿಕನಿಂದ ನಾವು ಬಯಸುವ ಸ್ವಭಾವಗಳಾದ ಸಹಕಾರ, ಸಂಯೋಜನೆ, ಮಾಲೀಕತ್ವ, ಜವಾಬ್ದಾರಿ, ಪಾಲ್ಗೊಳ್ಳುವಿಕೆ ಮತ್ತು ಬದ್ಧತೆಗೆ ಸಂಬಂಧಿಸಿದಂತೆ ಧನಾತ್ಮಕ ಬದಲಾವಣೆಗಳು ಉಂಟಾಗಿರುವುದನ್ನು ನಾವು ಗಮನಿಸಿದೆವು. ಇತ್ತೀಚೆಗೆ ನಮ್ಮ ಶಾಲೆಯಲ್ಲಿ ಗಣರಾಜ್ಯೋತ್ಸವ ದಿನಾಚರಣೆ-ಯಂದು ಒಬ್ಬ ವಿದ್ಯಾರ್ಥಿಯ ಭಾಷಣವನ್ನು ಕೇಳಿ ನನಗೆ ನಿಜಕ್ಕೂ ಸಂತೋಷವಾಯಿತು. ಆತ ಭಾರತದ ಸಂವಿಧಾನವನ್ನು ನಮ್ಮ ಶಾಲೆಯ ನೀತಿ ಸಂಪ್ರದಾಯಗಳ ಜಾರಿ ಮತ್ತು ಸಮಿತಿಗಳ ಕಾರ್ಯನಿರ್ವಹಣೆಗೆ ಹೋಲಿಸಿದ್ದನು. ನಮ್ಮ ಪ್ರಯತ್ನಗಳು ಸರಿಯಾದ ದಿಸೆಯಲ್ಲಿಯೇ ಸಾಗಿದೆ ಎಂಬುದನ್ನು ಇದು ಸೂಚಿಸುತ್ತದೆ.



ಅನಿಲ್ ಎಸ್. ಅಂಗಡಿಕಿ ಅವರು 2012ರಿಂದ ಅಜೀಂ ಪ್ರೇಮ್‌ಜಿ ಫೌಂಡೇಷನ್ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಯಾದಗಿರಿಯ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರನ್ನು anil.angadiki@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಮೆಲ್ವಿನ್ ಮೆಂಡೊನ್ಸಾ** । ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**

ಪೌರತ್ವ ಶಿಕ್ಷಣವನ್ನು ಅಲ್ಪಕಾಲೀನವಾಗಿ ನೀಡಲಾಗದು. ಇದನ್ನು ದೀರ್ಘಕಾಲೀನವಾಗಿ, ಸ್ಥಿರವಾಗಿ ಮತ್ತು ಪುನರಾವರ್ತಿತವಾಗಿ ಮಾಡಬೇಕು. ಬೇರೆ ಬೇರೆ ಪಂಗಡಗಳಲ್ಲಿ ಬೇರೆ ಬೇರೆ ವಿಚಾರಗಳು/ಪರಿಕಲ್ಪನೆಗಳು ಯಶಸ್ಸು ಸಾಧಿಸುತ್ತವೆ. ಯಾವುದು ಯಶಸ್ವಿಯಾಗುತ್ತದೆ ಅಥವಾ ಯಾವುದು ಯಶಸ್ವಿಯಾಗುವುದಿಲ್ಲ ಎಂದು ಹೇಳಲು ನಿರ್ದಿಷ್ಟವಾದ ಮಾದರಿ ಎನ್ನುವುದು ಇಲ್ಲ.

– ಉಮಾಶಂಕರ್ ಪೆರಿಯೋಡಿ, ಸೃಜನಶೀಲ ಕಾರ್ಯಾಗಾರಗಳ ಮೂಲಕ ಪೌರತ್ವ ಪು 105